# <u>ಹರಿ ನಾರಾಯಣ ಹರಿ ನಾರಾಯಣ</u>

(Version – 2)

**Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi

ರಾಗ: ಶಂಕರಾಭರಣ ತಾಳ: ಆದಿ

ಹರಿ ನಾರಾಯಣ ಹರಿ ನಾರಾಯಣ ಹರಿ ನಾರಾಯಣ ಎನು ಮನವೇ ॥ ಪ ॥
ದುರಿತ ಶರಧಿಯನುತ್ತರಿಸಬೇಕಾದರೆ ಸಿರಿಯರಸನ ಸ್ಮರಿಸಿರಿ ಸೊಲ್ಲ ॥ ಅಪ ॥

ಘೋರತರದ ಸಂಸಾರವು ದುಃಖದ ವಾರಿಧಿ ಇದರೊಳಗೇನುಂಟು
ಮೂರು ದಿನದ ಬಾಳಿಕೆ ಇದರೊಳಗಾರ್‍ಯೆಸುವುದೇತರ ನಂಟು
ತೋರುವ ಸಿರಿ ಸಂಪತ್ತಿನ ನೆಲೆಯು ವಿಚಾರಿಸಲದು ಕನಸಿನ ಗಂಟು
ಮಾರಮಣನ ಮನಮುಟ್ಟಿ ಭಜಿಸಿದರೆ ಕಾರಣ ಮುಕುತಿಗೆ ಕಡೆವುಂಟು ॥ ೧ ॥

ಲೆತ್ತ ಪಗಡೆ ಚತುರಂಗ ಜೂಜಾಟದಿ ಹೊತ್ತು ಕಳೆವುದೇತಕೆ ನೀನು
ಸುತ್ತಿ ಸುಳಿದು ಬಳಲುತ್ತ ಮಾಡಿದ ಗೃಹ ಕೃತ್ಯದಿ ನಿನಗಿಹ ಫಲವೇನು
ಅತ್ಯಾತುರದಿಂದ ಗಳಿಸಿದ ಆರ್ಜನೆ ಹತ್ತಿ ಸಂಗಡ ಬರುವುದೇನು
(ಕತ್ತಲೆಯೊಳು ಕಣ್ಣನು ತೆರೆದಂದದಿ ವ್ಯರ್ಥದಿ ಸಂಗ್ರಹಿಸುವುದೇನು)
ಮೃತ್ಯು ಭಯವ ನೀ ಜಯಿಸಬೇಕಾದರೆ ಪುರುಷೋತ್ತಮಗೆ ಶರಣೆನ್ನು ॥ ೨ ॥

ಕೂಳಿನ ಬಲದಲಿ ಬೆಳೆದೀ ಕಾಯವಿದು ಬಾಳುವೆ ಎಂಬುದು ಸ್ಥಿರವಲ್ಲ
ಮಾಳಿಗೆ ಮನೆ ಉಪ್ಪರಿಗೆ ಕೋಣೆಯು ನಾಳಿಗೆ ಅಲ್ಲಿಗೆ ಬರೋದಿಲ್ಲ
ಜಾಳಿಗೆ ತುಂಬಿದ ಹೊನ್ನಾಭರಣವು ನಾಳೆಗೆ ಸಂಗಡ ಬಾಹೋದಲ್ಲ
ಕಾಲನ ಭಯವನು ಕಳೆಯ ಬೇಕಾದರೆ ನಾಲಿಗೆಯಲಿ ಸ್ಮರಿಸಿರಿ ಸೊಲ್ಲ ॥ 3 ॥

ಮಡದಿ ಮಕ್ಕಳು ಮಮಕಾರದಲ್ಲಿ ಮನವಿಡುತಲಿ ನೀನಿರಬೇಡ
ಬಿಡಲಾರದ ಮಾಯಾ ಪಾಶಕೆ ಸಿಲುಕಿ ಕಡುಲೋಭಿಯಾಗಿ ನೀ ಕೆಡಬೇಡ
ತಡೆಯದೆ ಯಮನ ದೂತರು ಬಂದು ಎಳೆವಾಗ ಅವರಲಿ ಸಿಗಬೇಡ
ಕಡಲ ಶಯನನ ಭಜಿಸಲು ಮುಕ್ತಿಯ ಪಡೆಯ ಬಹುದು ನುತಿಸೊ ಗಾಢ ॥ ೪ ॥

ಕುಮತಿಗಳರಿಷಡ್ವರ್ಗ ಪರಾಕ್ರಮ ಗತಿಗಳನೆಲ್ಲವು ನೀ ಕ್ಷಮಿಸೋ
ಭ್ರಮೆಗೊಳಿಸುವ ಮಾಯೇಂದ್ರಿಯಂಗಳ ತವಕವಿಲ್ಲದಲೆ ನೀ ನಿಲ್ಲಿಸೊ
ಯಮನಾಳ್ಗಳು ಹಿಮ್ಮೆಟ್ಟುತಲಿಹರೊ ಕ್ರಮ ಕರ್ಮಗಳ ನಿಲ್ಲದೆ ನಡೆಸೊ
ಅಮಿತ ಪರಾಕ್ರಮ ಪುರಂದರ ವಿಠ್ಠಲನ ಪಾದ ಧ್ಯಾನದೊಳ್ಮನಸಿರಿಸೋ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ವಾರಿಧಿ** = ಸಮುದ್ರ

**ಘೋರ** = ಭಯಂಕರ

**ಲೆತ್ತ** = ಪಗಡೆ, ಅಹಂಕಾರಿ

**ಆರ್ಜಿತ** = ಗಳಿಸಲ್ಪಟ್ಟ, ಹೊಂದಿದ

**ಕೂಳು** = ಅನ್ನ

**ಜಾಳಿಗೆ** = ಹಣ ಇರಿಸುವ ಚೀಲ, ಕೈಚೀಲ

**ಸೊಲ್ಲು** = ಹೇಳು, ಮಾತನಾಡು

**Classification:** Keerthane
**Ankita:** purandara vittala
**Location:** NA
**Category:** Vishnu Stuti, Krishna Stuti, Jeevanoddhara
**Sub-Category:** Vishnu, Krishna, Narayana, mana, Samudra, dukha, dina, samsara, sampattu, kanasu, bhajane, mukti, kannu, marana, bhaya, jaya, sharana, anna, deha, mane, bangara, abharana, nalige, patni, makkalu, mAya, yama, karma, dhyAna,
**Pravachana:** NA
**Explanation:** NA